ಕನ್ನಡ ಪ್ರಭ

ಬೆಂಗಳೂರು । ಶುಕ್ರವಾರ 1 । ನವೆಂಬರ್ 2013

ಕವಿವಾಣಿ

ನಾಡೇ ನುಡಿಯು ನುಡಿಯೇ ನಾಡು
ಸ್ವತಂತ್ರ ದೇಶಕೆ ಬೇರಾವುದು ಹಾಡು
ಕನ್ನಡಕೇತಕೆ ಹೆರನುಡಿಯೊಜ್ಜೆ
ಹೇಸುವುದೇ ನುಡಿಗಿಳಿಯಲು ಬಿಜ್ಜೆ

• ಪು.ತಿ. ನರಸಿಂಹಾಚಾರ್

ಕನ್ನಡದ 'ಖಾಸಗಿ'ತನ

ಐಟಿ ಕಂಪನಿಗಳಲ್ಲೂ ಕನ್ನಡದ್ದೇ ಕಾರುಬಾರು

ಖಾಸಗಿ ಕಚೇರಿಗಳಲ್ಲಿ ಕನ್ನಡ ಸಾಯುತ್ತಿದೆ ಎಂಬ ಪೂರ್ವಗ್ರಹ ಆಲೋಚನೆ ಬಹಳಷ್ಟು ಜನರಲ್ಲಿದೆ. ಆದರೆ ವಾಸ್ತವದಲ್ಲಿ ವಿದೇಶಿಯರು ಕೂಡ ಕನ್ನಡ ಕಲಿಯುತ್ತಿದ್ದಾರೆ. ಆದರೆ ಅಲ್ಲಿ ಕನ್ನಡವು 'ಸೆಂಟಿಮೆಂಟ್ ಟೂಲ್' ಆಗಿ ಬಳಕೆಯಾಗುತ್ತಿದೆ.

ಕಾರ್ಪೊರೇಟ್ ಹಾಗೂ ವಾಣಿಜ್ಯ ವಲಯದಲ್ಲಿ ಕನ್ನಡಿಗ ಗ್ರಾಹಕರು, ಉದ್ಯೋಗಿಗಳು ಹಾಗೂ ಮಾರುಕಟ್ಟೆಯನ್ನು ಆಕರ್ಷಿಸಲು ಕನ್ನಡವನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಕನ್ನಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂದು ಕ್ಯಾತೆ ತೆಗೆಯುವವರು ಇರಬಹುದು, ಆದರೆ ಈ ಮೂಲಕವಾದರೂ ಕನ್ನಡದ ಇಂಪು ಪಸರಿಸುತ್ತಿದೆ ಎಂಬುದೇ ಸಮಾಧಾನದ ಸಂಗತಿ.

'ರಾಜ್ಯದಲ್ಲಿರುವ ಕಾರ್ಪೊರೇಟ್ ವಲಯದ ದಿಗ್ಗಜರು ತಮ್ಮ ಉದ್ಯೋಗಿಗಳ ಮನಸ್ಸು ಗೆಲ್ಲಲು ಕನ್ನಡದ ಕೆಲ ಪದಗಳನ್ನು ಕಲಿಯುತ್ತಾರೆ. ಈ ಮೂಲಕ ಉದ್ಯೋಗಿಗಳನ್ನು ಭಾವನಾತ್ಮಕವಾಗಿ ನಿಭಾಯಿಸಲು ಮುಂದಾಗುತ್ತಾರೆ. ಪರದೇಶಿಗರ ಅಥವಾ ಕನ್ನಡೇತರರ ಒಂದೆರಡು ಕನ್ನಡದ ಸಾಲುಗಳನ್ನು ಕೇಳಿಯೇ ಉದ್ಯೋಗಿಗಳು ಖುಷಿಯಾಗುತ್ತಾರೆ' ಎಂದು ಖ್ಯಾತ ಭಾಷಾ ಶಾಸ್ತ್ರಜ್ಞ ಪ್ರಕೃತಿ ಬನವಾಸಿ ಹೇಳುತ್ತಾರೆ.

ಕಡ್ಡಾಯವಾಗಿ ಕನ್ನಡ ಕಲಿಯುತ್ತಿದ್ದಾರೆ!

ಕರ್ನಾಟಕದಲ್ಲಿ ಕಂಪನಿ ಸ್ಥಾಪಿಸಿದ ಮೇಲೆ ಅಥವಾ ಇಲ್ಲಿ ಯಾವುದೋ ಒಂದು ಸಂಸ್ಥೆಯ ಜವಾಬ್ದಾರಿ ಪಡೆದುಕೊಂಡ ಮೇಲೆ ಕನ್ನಡದಲ್ಲಿ ವ್ಯವಹರಿಸುವ ಅನಿವಾರ್ಯತೆ ಎದುರಾಗುತ್ತದೆ. ಕಚೇರಿಯ ವ್ಯವಹಾರಗಳನ್ನು ಕನ್ನಡದಲ್ಲಿ ಮಾಡದಿರಬಹುದು. ಆದರೆ ಕಚೇರಿಯನ್ನು ಸುಲಲಿತವಾಗಿ ನಿರ್ವಹಿಸಲು ಕನ್ನಡ ಬೇಕಾಗುತ್ತದೆ. ಉದ್ಯೋಗಿಗಳ ಒಕ್ಕೂಟದಲ್ಲಿ ಏನಾದರೂ ಸಮಸ್ಯೆಯಾದಾಗ ಅಥವಾ ಕನ್ನಡದ ಉದ್ಯೋಗಿಯೊಬ್ಬ ಅಸಮಧಾನ ಹೊಂದಿದಾಗ ಕಂಪನಿಯ ಮುಖ್ಯಸ್ಥನ ಒಂದು ಕನ್ನಡದ ಸಮಾಧಾನಕರ ಮಾತುಗಳು ಖುಷಿ ನೀಡಬಹುದು ಎಂದು ಮಾನವ ಸಂಪನ್ಮೂಲ ಅಧಿಕಾರಿಗಳು ಹೇಳುತ್ತಾರೆ.

ಇದೇ ಕಾರಣದಿಂದ ಬೆಂಗಳೂರಿಗೆ ಬರುವ ಕಾರ್ಪೊರೇಟ್ ಕಂಪನಿಗಳ ದಿಗ್ಗಜರು ಕನ್ನಡದ ಕೆಲ ಶಬ್ದಗಳನ್ನು ಕಲಿಯುತ್ತಾರೆ. ವಿಶೇಷವಾಗಿ 'ಮಾಡು, ನೋಡು, ಬನ್ನಿ, ಹೋಗಿ, ಆಯ್ತಾ' ಅಂತಹ ಶಬ್ದಗಳನ್ನು ಇಂಗ್ಲಿಷ್ ವಾಕ್ಯಗಳ ನಡುವೆ ಸೇರಿಸಿದರೆ ಸಾಮಾನ್ಯ ಕನ್ನಡಿಗ ಮಾತನಾಡುವ ಕನ್ನಡವಾಗುತ್ತದೆ. ಒಂದು ಕನ್ನಡದ ಮಾತಿನಿಂದ ಸಂಸ್ಥೆಯ ಸಮಸ್ಯೆ ದೂರವಾದರೆ ಕನ್ನಡದ ಕೆಲ ಶಬ್ದ ಕಲಿಯುವುದರಲ್ಲಿ ಯಾವ ತಪ್ಪಿದೆ ಎಂಬ ಪ್ರಾಥಮಿಕ ಸತ್ಯವನ್ನು ಕೆಲ ಕಾರ್ಪೊರೇಟ್ ಮುಖ್ಯಸ್ಥರು ಅರಿತುಕೊಂಡಿದ್ದಾರೆ ಎಂದು ಪ್ರಕೃತಿ ಬನವಾಸಿ ಅಭಿಪ್ರಾಯಪಡುತ್ತಾರೆ. ಇನ್ನು ವಾಣಿಜ್ಯ ಕ್ಷೇತ್ರದಲ್ಲಿಯೂ ತಮ್ಮ ವಿಸ್ತಾರಗಳನ್ನು ಬೆಳೆಸಿಕೊಳ್ಳಲು ದೊಡ್ಡ ಫ್ರಾಂಚೈಸಿ ಕಂಪನಿಗಳು ತಮ್ಮ ಏಜೆಂಟ್‌ಗಳಿಗೆ ಕಡ್ಡಾಯವಾಗಿ ಕನ್ನಡ ಕಲಿಸುತ್ತಿದ್ದಾರೆ. ಬೆಂಗಳೂರಿನಿಂದ ಹೊರ ಭಾಗದಲ್ಲಿ ಮಾರುಕಟ್ಟೆ ವಿಸ್ತರಿಸುವಾಗ ಕನ್ನಡದಲ್ಲಿ ವ್ಯವಹರಿಸುವುದು ಅನಿವಾರ್ಯ. ಈ ವಿಭಾಗದಲ್ಲಿ ಉತ್ತರ ಭಾರತೀಯರೇ ಹೆಚ್ಚು ತೊಡಗಿಕೊಂಡಿದ್ದಾರೆ. ಅವರು ಬಳಸುವ ಕನ್ನಡದಿಂದ ರಾಜ್ಯದ ಇತರ ಭಾಗದ ಉದ್ಯಮಿಗಳು ಆಕರ್ಷಿತರಾಗುತ್ತಾರೆ. ಏಕೆಂದರೆ ಕೆಲವೊಮ್ಮೆ ಪ್ರತಿಷ್ಠೆಗಾಗಿ ಎಷ್ಟೇ ಕನ್ನಡದಲ್ಲಿ ವ್ಯವಹರಿಸಿದರೂ ವ್ಯವಹರಿಸುವಾಗ ಜನರು ಕನ್ನಡವನ್ನೇ ಬಯಸುತ್ತಾರೆ. ವಿವರಣೆಯನ್ನು ಕನ್ನಡದಲ್ಲಿಯೇ ನೀಡಿದಾಗ ಇಷ್ಟಪಡುತ್ತಾರೆ ಎಂದು ಎಲೆಕ್ಟ್ರಾನಿಕ್ ಸಲಕರಣೆಗಳ ಉದ್ಯಮಿ ಸಾಕೇತ್ ಝಾ ಅಭಿಪ್ರಾಯಪಡುತ್ತಾರೆ.

ತಿನ್ನೋಕೆ ಏನಿದೆ ಗುರು!

ಫ್ರೈವ್ ಸ್ಟಾರ್ ಹೋಟೇಲ್‌ಗೆ ಕುಟುಂಬದ ಜತೆ ಊಟಕ್ಕೆ ಹೋದಾಗ 'ವಾಟ್ಸ್ ದಿ ಮೆನು' ಅನ್ನೋದರ ಬದಲು 'ಏನಿದೆ ಗುರು' ಎಂಬ ಮಾತಿನ ಬಳಕೆ ಕನ್ನಡದ ಉಳಿವಿಗೆ ಮಾಡುವ ಸಣ್ಣ ಪ್ರಯತ್ನವಾಗಬಹುದು. ಹೋಟೇಲ್ ಸಪ್ಲೈಯರ್‌ಗೆ ಕನ್ನಡ ಬರುವುದಿಲ್ಲ ಎಂಬ ಅಜ್ಞಾನದಿಂದ ಇಂಗ್ಲಿಷ್ ಮಾತನಾಡುವ ಬದಲು ಕನ್ನಡವನ್ನೇ ಬಳಸಿದರೆ ಕನ್ನಡಿಗನೊಬ್ಬನಿಗೆ ಉದ್ಯೋಗಾವಕಾಶ ಹೆಚ್ಚುತ್ತದೆ. ಗ್ರಾಹಕರು ಕನ್ನಡದಲ್ಲಿ ವ್ಯವಹರಿಸುವುದರಿಂದ ಮಾಲೀಕರು ಕನ್ನಡ ಬರುವ ಸಪ್ಲೈಯರ್‌ಗಳನ್ನು ಹೋಟೇಲ್‌ಗೆ ನೇಮಿಸಿಕೊಳ್ಳುತ್ತಾರೆ. ಇದು ಸಣ್ಣ ವಿಚಾರವಾದರೂ ಇಂತಹ ಸಾಕಷ್ಟು ಅನವಶ್ಯಕ ಇಂಗ್ಲಿಷ್ ಸಂವಾದ ನಿಲ್ಲಿಸುವುದರಿಂದ ಮಾತುಗಳ ಮೂಲಕವೇ ಉದ್ಯೋಗ ಸೃಷ್ಟಿಸುವ ಸಾಧ್ಯತೆಯಿದೆ.

ಆಡಳಿತ ಭಾಷೆಯಾಗಿ ಬಳಕೆ ಅಸಾಧ್ಯ

ರಾಜ್ಯ ಸರ್ಕಾರದ ನಡಾವಳಿಗಳನ್ನೇ ಕನ್ನಡದಲ್ಲಿ ತರಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಐಎಎಸ್ ಅಧಿಕಾರಿಗಳ ವಲಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನ ಮಾಡಲಾಗುತ್ತಿಲ್ಲ. ಈ ನಡುವೆ ಖಾಸಗಿ ವಲಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಕೆಗೆ ತರಲು ಸಾಧ್ಯವಿಲ್ಲ ಎಂಬ ಮಾತುಗಳು ಕೇಳಿಬರುತ್ತವೆ. ಏಕೆಂದರೆ ಇದಕ್ಕೆ ಪೂರಕವಾದ ತಂತ್ರಾಂಶಗಳ ಅಭಿವೃದ್ಧಿಯಾಗುತ್ತಿಲ್ಲ. ಇನ್ನು ಖಾಸಗಿ ಕಂಪನಿಗಳು ರಾಜ್ಯವನ್ನು ಹೊರತುಪಡಿಸಿ ಬೇರೆಡೆಯೂ ವಿಸ್ತರಿಸಿಕೊಂಡಿರುವಾಗ ಕನ್ನಡವನ್ನು ಆಡಳಿತದಲ್ಲಿ ತರಲು ಸಾಧ್ಯವಾಗುವುದಿಲ್ಲ.

ಕನ್ನಡದ ಮುಕ್ತ ಜ್ಞಾನಕೋಶವಾದ ವಿಕಿಪೀಡಿಯ ಈಗ ಜನಪ್ರಿಯ

ಅಂತರ್ಜಾಲದಲ್ಲಿ ನೆಟ್ಟ ಸಸಿಗೆ ಈಗ ಹತ್ತು ವರ್ಷ

ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಎಂಬಂತೆ ನವೆಂಬರ್ ಕೂಡ ಮರಳಿ ಬರುತಿದೆ (ಬೇಂದ್ರೆಯವರು ಕ್ಷಮಿಸುತ್ತಾರೆ). ಕನ್ನಡದ ಸ್ಥಿತಿಗತಿ ಬಗ್ಗೆ ಮತ್ತೊಮ್ಮೆ ಲೇಖನಗಳ ಮಹಾಪೂರದ ಸಮಯ. ಪ್ರತಿ ನವೆಂಬರ್‌ಗೆ ಇದನ್ನು ಮತ್ತೆ ಮತ್ತೆ ಓದುವುದು ಎಲ್ಲರಿಗೂ ರೂಢಿಯಾಗಿದೆ. ಅಂತೆಯೇ ಮತ್ತೆ ಮತ್ತೆ ಬರೆಯುವುದು ನಮಗೆ ರೂಢಿಯಾಗಿ ಬಿಟ್ಟಿದೆ.

'ಪೆಟ್ರೋಲ್ ಉಳಿಸಬೇಕಾದರೆ ಪೆಟ್ರೋಲ್ ಬಳಸಬಾರದು. ಕನ್ನಡ ಉಳಿಸಬೇಕಾದರೆ...?' ಎಂಬ ಮಾತು ಪ್ರತಿ ನವೆಂಬರ್ ಒಂದರಂದು ಅತ್ತಿಂದಿತ್ತ ಹರಿದಾಡುವ ಒಂದು ಜೋಕ್. ಕನ್ನಡ ಉಳಿಯಬೇಕಾದರೆ ಕನ್ನಡ ಬಳಸಬೇಕು. ಇದು ಎಲ್ಲರೂ ಒಪ್ಪುವ ಮಾತು. ಕನ್ನಡ ಬಳಸುವುದೆಂದರೆ ನಿತ್ಯದ ವ್ಯವಹಾರಗಳಲ್ಲಿ ಕನ್ನಡ ಬಳಸುವುದು. ಕನ್ನಡ ಭಾಷೆಯ ಶ್ರೀಮಂತಿಗೆ ಬಗ್ಗೆ ಭಾಷಣ ಬಿಗಿದು ಮೇಜು ಕುಟ್ಟುವುದರಿಂದ ಕನ್ನಡ ಉಳಿಯುವುದಿಲ್ಲ. ಅದು ಉಳಿಯಬೇಕಾದರೆ ಜನಸಾಮಾನ್ಯರು ಅದನ್ನು ಬಳಸಬೇಕು. ಜನಸಾಮಾನ್ಯರಿಗೆ ಪ್ರಮುಖವಾಗಿ ಬೇಕಾಗಿರುವುದು ಸಾಹಿತಿಗಳು ಬೆನ್ನು ತಟ್ಟಿಕೊಳ್ಳುವ ಸೃಜನಶೀಲ (ಕಥನ) ಸಾಹಿತ್ಯವಲ್ಲ. ಅದು ಬೇಡ ಎಂದಲ್ಲ. ಆದರೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದುದು ಮಾಹಿತಿ ಸಾಹಿತ್ಯ. ಒಬ್ಬಾತನಿಗೆ ಹೊಚ್ಚಹೊಸ ನಮೂನೆಯ ಪ್ಲಾಸ್ಮಾ, ಎಲ್‌ಸಿಡಿ ಅಥವಾ ಎಲ್‌ಇಡಿ ಟಿವಿ ಖರೀದಿಸಬೇಕಾಗಿದೆ ಎಂದಿಟ್ಟುಕೊಳ್ಳಿ. ಆತನಿಗೆ ಇವುಗಳ ವ್ಯತ್ಯಾಸ ಗೊತ್ತಿರಬೇಕು. ತನ್ನ ಅಗತ್ಯ ಮತ್ತು ಇತಿಮಿತಿಯೊಳಗೆ ಯಾವುದು ಉತ್ತಮ ಎಂದು ತಿಳಿಯಬೇಕು. ಆತ ಇದನ್ನು ಕನ್ನಡದಲ್ಲಿ ತಿಳಿಯುವ ಬಗೆ ಹೇಗೆ? ಇದಕ್ಕೆ ಬೇಕು ಒಂದು ವಿಶ್ವಕೋಶ.

ಈಗ ಇನ್ನೊಂದು ವಿಷಯದ ಕಡೆ ಗಮನ ಹರಿಸೋಣ. ಈಗ ಇಂಗ್ಲಿಷ್ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ಬಗ್ಗೆ ಚರ್ಚೆ ನಡೆಯುತ್ತಿದೆ. ಕನ್ನಡ ಮಾಧ್ಯಮದಲ್ಲಿ ಕಲಿತರೆ ನಮ್ಮ ಮಕ್ಕಳಿಗೆ ಪ್ರಪಂಚ ಜ್ಞಾನ ದೊರೆಯುವುದಿಲ್ಲ. ಆದ್ದರಿಂದ ನಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುತ್ತೇವೆ ಎಂದು ಹೆಚ್ಚಿನ ತಂದೆತಾಯಂದಿರು ಹೇಳುತ್ತಾರೆ. ಕನ್ನಡ ಭಾಷೆಯಲ್ಲಿ ಪ್ರಪಂಚ ಜ್ಞಾನದ ಲಭ್ಯತೆ ತುಂಬಾ ಕಡಿಮೆ ಎಂಬುದನ್ನು ನಾವು ಒಪ್ಪಲೇಬೇಕು. ಆದರೆ ಈ ಸಮಸ್ಯೆಗೆ ಪರಿಹಾರ ಇಂಗ್ಲಿಷ್ ಭಾಷೆಗೆ ಮೊರೆಹೋಗುವುದಲ್ಲ. ಕನ್ನಡ ಭಾಷೆಯಲ್ಲಿ ಪ್ರಪಂಚ ಜ್ಞಾನವನ್ನು ತರುವುದು. ಈ ರೀತಿ ಮಾಡಲು ಸಹಾಯ ಮಾಡುವುದು ಅತಿ ಜನಪ್ರಿಯವಾಗಿರುವ ಸ್ವತಂತ್ರ ಮತ್ತು ಮುಕ್ತ ವಿಶ್ವಕೋಶ ಕನ್ನಡ ವಿಕಿಪೀಡಿಯ.



■ ಡಾ. ಯು.ಬಿ.ಪವನಜ

ವಿಕಿಪೀಡಿಯ ಒಂದು ಸ್ವತಂತ್ರ ಮತ್ತು ಮುಕ್ತ ವಿಶ್ವಕೋಶ. ಇದು 2001ರಲ್ಲಿ ಪ್ರಾರಂಭವಾಯಿತು. ಇದು ಜಗತ್ತಿನ 286 ಭಾಷೆಗಳಲ್ಲಿದೆ. ಇನ್ನೂ ಸುಮಾರು 300 ಭಾಷೆಯ ವಿಕಿಪೀಡಿಯಗಳು ತಯಾರಿ ಹಂತದಲ್ಲಿವೆ. ಸುಮಾರು 20ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ ವಿಕಿಪೀಡಿಯ ಲಭ್ಯ. ಅದರಲ್ಲಿ ಕನ್ನಡವೂ ಸೇರಿದೆ. ಭಾರತೀಯ ಭಾಷೆಯ ವಿಕಿಪೀಡಿಯಗಳಲ್ಲಿ ಹಿಂದಿ, ತಮಿಳು, ತೆಲುಗು, ಮಲಯಾಳಂ, ಮರಾಠಿ, ಬೆಂಗಾಳಿ ವಿಕಿಪೀಡಿಯಗಳು ಕನ್ನಡಕ್ಕಿಂತ ಅಂಕಿ ಅಂಶಗಳಲ್ಲಿ ಮುಂದಿವೆ. ಕನ್ನಡ ವಿಕಿಪೀಡಿಯ 2003ರಲ್ಲಿ ಪ್ರಾರಂಭವಾಯಿತು. ಅಂದರೆ ಕನ್ನಡ ವಿಕಿಪೀಡಿಯಕ್ಕೆ ಈಗ ದಶಮಾನೋತ್ಸವ.

ಎಲ್ಲ ವಿಕಿಪೀಡಿಯಗಳಂತೆ ಕನ್ನಡ ವಿಕಿಪೀಡಿಯವೂ ಜನರಿಂದ ಜನರಿಗಾಗಿ ಜನರೇ ನಡೆಸುವ ಒಂದು ಮುಕ್ತ ಮತ್ತು ಸ್ವತಂತ್ರ ವಿಶ್ವಕೋಶ. ಇದಕ್ಕೆ ಯಾರು ಬೇಕಾದರೂ ಸಂಪಾದಕರಾಗಿ ಲೇಖನ ಸೇರಿಸಬಹುದು. ಇರುವ ಲೇಖನ ತಿದ್ದಬಹುದು. ಇನ್ನೊಬ್ಬರು ಬರೆದ ಲೇಖನದಲ್ಲಿ ಏನಾದರೂ ತಪ್ಪುಗಳು ಕಂಡುಬಂದರೆ ಅಥವಾ ಮಾಹಿತಿಯ ಕೊರತೆ ಇದ್ದಲ್ಲಿ ಆ ಮಾಹಿತಿ ನಿಮ್ಮಲ್ಲಿ ಇದ್ದಲ್ಲಿ ಅದನ್ನು ನೀವೇ ತಿದ್ದಬಹುದು ಮತ್ತು ಹೆಚ್ಚಿನ ಮಾಹಿತಿ ಸೇರಿಸಬಹುದು. ನಿಮಗೆ ಒಂದು ವಿಷಯದ ಬಗ್ಗೆ ಚೆನ್ನಾಗಿ ತಿಳಿದಿದೆ ಮತ್ತು ಆ ವಿಷಯದ ಬಗ್ಗೆ ವಿಕಿಪೀಡಿಯದಲ್ಲಿ ಲೇಖನ ಇಲ್ಲ ಎಂದಾದಲ್ಲಿ ಆ ಬಗ್ಗೆ ಒಂದು ಹೊಸ ಲೇಖನವನ್ನು ನೀವೇ ಸೇರಿಸಬಹುದು. ನಿಮ್ಮ ಲೇಖನ ಯಾರೋ ಒಬ್ಬರು ಒಪ್ಪಿದ ನಂತರ ಅದು ಪ್ರಕಟವಾಗುವ ಪರಿಪಾಠ ಇಲ್ಲಿಲ್ಲ. ನೀವು ಲೇಖನ ಬರೆದು ಪುಟ ಉಳಿಸಿ ಎಂಬುದರ ಮೇಲೆ ಕ್ಲಿಕ್ ಮಾಡಿದರೆ ನಿಮ್ಮ ಲೇಖನ ಕನ್ನಡ ವಿಕಿಪೀಡಿಯಕ್ಕೆ ಸೇರ್ಪಡೆಯಾಗುತ್ತದೆ. ಪ್ರಪಂಚದಾದ್ಯಂತ ಹಬ್ಬಿರುವ ಕನ್ನಡಿಗರಿಗೆ ಅದು ಕ್ಷಣಮಾತ್ರದಲ್ಲಿ ದೊರೆಯುವಂತಾಗುತ್ತದೆ.

ವಿಕಿಪೀಡಿಯ ಆದಾಯರಹಿತ (ನಾನ್ ಪ್ರಾಫಿಟ್) ಸಂಸ್ಥೆಯಾದ ವಿಕಿಮೀಡಿಯ ಫೌಂಡೇಶನ್‌ನ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಸರ್ಕಾರಿ ಸಂಸ್ಥೆಯಲ್ಲ, ಸರ್ಕಾರದಿಂದ ಯಾವುದೇ ರೀತಿಯ ಅನುದಾನವನ್ನೂ ಪಡೆಯುತ್ತಿಲ್ಲ. ಈ ಯೋಜನೆಗೆ ಅವಶ್ಯಕವಾದ ಬಂಡವಾಳವನ್ನು ವಿಕಿಪೀಡಿಯದ ಸಾಮಾನ್ಯ ಬಳಕೆದಾರರಿಂದ ದೇಣಿಗೆಯ ರೂಪದಲ್ಲಿ ಸಂಗ್ರಹಿಸಲಾಗಿದೆ. ವಿಕಿಪೀಡಿಯ ನಡೆಸಲು ನೀವೂ ಧನಸಹಾಯ ನೀಡಬಹುದು. ಇಂದು ವಿಕಿಪೀಡಿಯ ಇಷ್ಟು ಜನಪ್ರಿಯವಾಗಿರುವ ಕಾರಣ ಕೆಲವು ಸರ್ಕಾರಿ ಹಾಗೂ ಕಾರ್ಪೊರೇಟ್ ಸಂಸ್ಥೆಗಳು ಕೂಡ ಧನಸಹಾಯ ನೀಡಲು ಮುಂದಾಗಿವೆ.

ವಿಕಿಪೀಡಿಯದಲ್ಲಿ ಮಾಹಿತಿ ಸೇರಿಸುವುದಕ್ಕೆ ನಾವು ತಜ್ಞರೇ ಆಗಿರಬೇಕು ಎನ್ನುವುದು ತಪ್ಪು. ವಾಸ್ತವವಾಗಿ ವಿಕಿಪೀಡಿಯದ ಯಾವುದೇ ಬರಹ ಒಬ್ಬನೇ ಲೇಖಕ ಬರೆದುದಲ್ಲ. ಬೇರೆ ಬೇರೆ ದೇಶ, ಹಿನ್ನೆಲೆಗಳ ಅನೇಕ ಮಂದಿಯ ಸಹಕಾರದಲ್ಲಿ ಪ್ರತಿಯೊಂದು ಪುಟವೂ ರೂಪುಗೊಳ್ಳುತ್ತದೆ. ವಿಕಿಪೀಡಿಯ ಒಂದು ಸಹಯೋಗಿ ವಿಶ್ವಕೋಶ. ನಿಮಗೆ ತಿಳಿದಷ್ಟು ನೀವು ಸೇರಿಸಿ. ನೀವು ಬಿಟ್ಟಿರುವುದನ್ನು ವಿಷಯ ತಿಳಿದ ಬೇರೆ ಯಾರಾದರು ಸೇರಿಸುತ್ತಾರೆ.

ಕನ್ನಡ ವಿಕಿಪೀಡಿಯದಲ್ಲಿ ಬರೆಯುವುದರಿಂದ ಯಾವುದೇ ಆರ್ಥಿಕ ಲಾಭವಿಲ್ಲ. ಲೇಖಕರ ಹೆಸರನ್ನೂ ಲೇಖನದ ಕೆಳಗೆ ಬರೆಯುವ ಪರಿಪಾಠವಿಲ್ಲ. ವಿಕಿಪೀಡಿಯದಲ್ಲಿ ಬರೆಯುವುದೆಂದರೆ ನಿಜವಾದ ಸ್ವಾರ್ಥರಹಿತ ಸಮಾಜ ಸೇವೆ. ನಮ್ಮ ಭಾಷೆಯ ಉಳಿವಿಗೆ ಇದು ಅತೀ ಅಗತ್ಯ.. ಆದ್ದರಿಂದ ಇಂದೇ ಕೀಲಿಮಣೆ ಮೇಲೆ ಕುಟ್ಟಿ – kn.wikipedia.org.

ತಂದೆಯ ಸಾವನ್ನೂ ನುಂಗಿ ಕನ್ನಡಕ್ಕಾಗಿ ಹೋರಾಡಿದರು!

ರೇಲ್ವೆ ನೇಮಕದಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕೆಂಬ ಹೋರಾಟ ತೀವ್ರತೆಯ ಪರಾಕಾಷ್ಠೆ ತಲುಪಿತ್ತು. ರೈಲುಗಳನ್ನು ತಡೆದು ಕೇಂದ್ರ ಸರ್ಕಾರವನ್ನು ಎಚ್ಚರಿಸುವ ಹೋರಾಟದಲ್ಲಿ ಮಂಚೂಣಿಯಲ್ಲಿದ್ದ ಸಣ್ಣೀರಪ್ಪ ಅವರಿಗೆ ಅದೇ ದಿನ ತಂದೆ ಸಾವಿನ ಸುದ್ದಿಯೂ ಬಂತು. ಒಂದು ಕಡೆ ಕರುಳಿನ ಕೂಗು. ಮತ್ತೊಂದೆಡೆ ಕನ್ನಡದ ಕೂಗು. ಆಗ ಸಣ್ಣೀರಪ್ಪ ಯಾವುದನ್ನು ಆರಿಸಿಕೊಳ್ಳಬೇಕು?

■ ಕನ್ನಡದ ಕಟ್ಟಾಳು ಈ ದೊಡ್ಡ ಮನಸ್ಸಿನ ಸಣ್ಣೀರಪ್ಪ

ಇಂತಹ ಸಂದಿಗ್ಧತೆಯ ನಡುವೆಯೂ ಅವರು 6 ಕೋಟಿ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸುವ ಕನ್ನಡ ಕೂಗಿಗೇ ಆದ್ಯತೆ ನೀಡಿದರು. ತಂದೆ ಸಾವನ್ನೂ ನುಂಗಿಕೊಂಡು ಹೋರಾಟದ ಕಿಚ್ಚಿನಲ್ಲಿ ಒಂದಾಗಿ ಹೋದರು. ಹೀಗಾಗಿ ಸಣ್ಣೀರಪ್ಪ ಕರ್ನಾಟಕ ರಕ್ಷಣಾ ವೇದಿಕೆಯ ಆಧಾರಸ್ತಂಭಗಳಲ್ಲಿ ಒಂದಾದರು. ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರ ಆದೇಶ ಬಂತೆಂದರೆ ಸಾಕು, ಕ್ಷಣಾರ್ಧದಲ್ಲೇ ಎಲ್ಲ ಜಿಲ್ಲೆಗಳು, ತಾಲೂಕು ಸಂಘಟನೆಗಳನ್ನು ಸಂಪರ್ಕಿಸಿ ಹೋರಾಟಕ್ಕೆ ಸಹಸ್ರ, ಸಹಸ್ರ ಕಾರ್ಯಕರ್ತರನ್ನು ಸಿದ್ಧಪಡಿಸುತ್ತಾರೆ. ವಾಹನಗಳು, ವೇದಿಕೆ, ಮಾಧ್ಯಮಗಳು, ಊಟ, ಉಪಚಾರ ಎಲ್ಲವೂ ಸಜ್ಜು ಎನ್ನುತ್ತಾರೆ. ಅಷ್ಟರ ಮಟ್ಟಿಗೆ ಹೋರಾಟ ರೂಪಿಸುವ, ಕಾರ್ಯಕರ್ತರನ್ನು ಸಂಘಟಿಸುವ, ಕನ್ನಡಿಗರನ್ನು ಅಭಿಮಾನದಿಂದ ಸೆಳೆಯುವ ಕಲೆಗಾರಿಕೆ ಸಣ್ಣೀರಪ್ಪ ಅವರಿಗೆ ರಕ್ತಗತ.

ಕಾಲೇಜಿನಲ್ಲಿ ಕನ್ನಡ ಕಟ್ಟಾಳು: ಅಂದ ಹಾಗೆ ಬಿ.ಸಣ್ಣೀರಪ್ಪ. ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಬಾಣಗಾರಹಳ್ಳಿಯವರು. ತಂದೆ ಬಂಡೀರಪ್ಪ, ತಾಯಿ ಆಲಮ್ಮ ಕೃಷಿಕರು. ವ್ಯಾಸಂಗಕ್ಕಾಗಿ ಬೆಂಗಳೂರಿನ ಬಂದ ಸಣ್ಣೀರಪ್ಪ ಶೇಷಾದ್ರಿಪುರಂ ಕಾಲೇಜಿಗೆ ಸೇರಿದರು. ಅವರಿಗೆ ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಭಾರಿ ಒಲವು ಸಹಪಾಠಿ ದೇವರಾಜ್ ಮತ್ತು ಆಂಜನಪ್ಪ ಜತೆ ಸೇರಿ ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿ ಸಂಘ ಸ್ಥಾಪಿಸಿದರು. ಅಷ್ಟೇ ಅಲ್ಲ. ಕನ್ನಡ ವಿದ್ಯಾರ್ಥಿಗಳ ಹಿತಾಸಕ್ತಿ ಕಾಪಾಡಲು, ಸ್ಥಳೀಯ ಸಮಸ್ಯೆ ವಿರುದ್ಧ ಹೋರಾಟ ನಡೆಸಲು ಮುಂದಾದರು. ಈ ಮೂಲಕನಾರಾಯಣಗೌಡರ ಗಮನ ಸೆಳೆದರು.

ಕಾನ್ವೆಂಟ್‌ನಲ್ಲಿ ಕನ್ನಡ ಧ್ವನಿ

ಶಾಲೆಯಲ್ಲಿ ನಾನು ಮಾತನಾಡುವುದು ಆಂಗ್ಲಭಾಷೆ. ಮನೆಯಲ